# ನಗರಸಭಾ ಕಾರ್ಯಾಲಯ ಶಿವಮೊಗ್ಗ.

ಕ್ರ.ಸಂ.ನಸಶಿ:ಕಾವಿ:ಎ.ಇ:ಎನ್.ಆರ್:05:2009-10 ದಿನಾಂಕ:05-09-2009

## ಟೆಂಡರ್ ಪ್ರಕಟಣೆ

ಸರ್ಕಾರದ ಯೋಜನೆಯಡಿಯ ಐ.ಡಿ.ಎಸ್.ಎಂ.ಟಿ. ಮತ್ತು ಮುಂಬರುವ ಎಸ್.ಎಫ್.ಸಿ. ಹಾಗೂ ನಗರಸಭೆನಿಧಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಕ್ಲಾಸ್ -1 ಗುತ್ತಿಗೆದಾರರಿಂದ ಈ ಕೆಳಕಂಡ ಕೆಲಸಕ್ಕೆ ನಿಗದಿತ ನಮೂನೆಯಲ್ಲಿ ಮೊಹರಾದ ಲಕೋಟೆಯಲ್ಲಿ ಮೇಲೆ ಕೆಲಸದ ಹೆಸರುನ್ನು ಬರೆದಿರುವ ಐಟಂವಾರು ಟೆಂಡರ್‌ನ್ನು ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್ Kw-4 ರಂತೆ ದ್ವಿಪ್ರತಿಯಲ್ಲಿ. **ಎರಡು ಲಕೋಟೆ ಪದ್ಧತಿಯಲ್ಲಿ** ಆಹ್ವಾನಿಸಲಾಗಿದೆ. ಮತ್ತು ಈ ಕೆಳಗೆ ಸೂಚಿಸಿರುವ ದಿನಾಂಕಗಳಂದು ಸಾಯಂಕಾಲ 4-30 ಗಂಟೆಗೆ ಸ್ವೀಕರಿಸಲಾಗುವುದು. ಸಾಧ್ಯವಾದಲ್ಲಿ ಅದೇ ದಿನ ಸಾಯಂಕಾಲ 5-00 ಗಂಟೆಗೆ ಅಥವಾ ಇತರೆ ಅನುಕಾಲವಾದ ದಿನ ಟೆಂಡರ್‌ದಾರರು ಅಥವಾ ಅವರ ಏಜೆಂಟರುಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಸಾರ್ವಜನಿಕ ರಜೆಯಾದರೆ ಮಾರನೇ ದಿನವೇ ಈ ದಿನಾಂಕದ ಬದಲು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು. ಯಾವುದೇ ಅಥವಾ ಟೆಂಡರ್‌ನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಟೆಂಡರ್ ಬಾಕ್ಸ್‌ನ್ನು ನಗರಸಭೆ ಕಛೇರಿ ಹಾಗೂ ಜಿಲ್ಲಾಧಿಕಾರಿಗಳು ಶಿವಮೊಗ್ಗ ರವರ ಕಛೇರಿಯಲ್ಲಿ ಇಡಲಾಗುವುದು.

ಟೆಂಡರ್ ಫಾರಂಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಈ ಕೆಳಗೆ ನಮೂದಿಸಲಾದ ದಿನಾಂಕಗಳಲ್ಲಿ ನಿಗದಿತ ಟೆಂಡರ್ ಫಾರಂಗಳ ಬೆಲೆಯನ್ನು ನೀಡಿ ಪಡೆಯಬಹುದು ಹಾಗೂ ಫಾರಂ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

1 ಟೆಂಡರ್ ಫಾರಂಗಳಿಗೆ ನಗರಸಭೆ ರಶೀದಿಯೊಂದಿಗೆ ಅರ್ಜಿಸಲ್ಲಿಸುವ ಹಾಗೂ ನಗರಸಭೆಯಿಂದ ಖಾಲಿ ಟೆಂಡರ್ ಪಾರಂಗಳನ್ನು ನೀಡುವ ದಿನಾಂಕ:15-09-2009 ರಿಂದ 12-10-2009ರವರೆಗೆ.(ಸಂಜೆ 5ರ ವರೆಗೆ)

2 ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು (ಡಬ್ಬಿಗೆ) ಸ್ವೀಕರಿಸುವ ದಿನಾಂಕ 13-10-2009.(ಸಂಜೆ 4ರ ವರೆಗೆ)

3 ಟೆಂಡರ್ ತೆರೆಯುವ ದಿನಾಂಕ:13-10-2009. (ಸಂಜೆ.5.00ಕ್ಕೆ)

4 ಕಾಮಗಾರಿಯ ಪೂರೈಸುವ ಅವಧಿ: 12 ತಿಂಗಳು

| ಕ್ರ ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ (ರೂ.ಲಕ್ಷಗಳಲ್ಲಿ) | ಫಾರಂ ಶುಲ್ಕ (ತೆರಿಗೆ ಸೇರಿ) |
|---|---|---|---|---|
| 1 | ಶಿವಮೊಗ್ಗ ನಗರದ ನೆಹರೂ ರಸ್ತೆಯಲ್ಲಿನ ನಗರಸಭಾ ಸ್ವತ್ತಿನಲ್ಲಿ (68/68/265) ವಾಣಿಜ್ಯ ಸಂಕೀರ್ಣ ನಿರ್ಮಾಣ | 199 | 2.99 | 20000 |

## ಷರತ್ತುಗಳು

1 ಅರ್ಜಿದಾರರು ಟೆಂಡರ್ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರಬೇಕು. ಸರ್ಕಾರಿ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ 344 ಸಿ.ಆರ್.ಎಂ.2000 ದಿನಾಂಕ 15-01-2002ರ ಪ್ರಕಾರ ಈ ಕಾಮಗಾರಿಗಳಿಗೆ ನಿರ್ದಿಷ್ಟ ಪಡಿಸಿದ ಮೊತ್ತದ ಶೇಕಡ 50ರಷ್ಟು ಮೊತ್ತದ ಸಮನಾದ ಕಾಮಗಾರಿಯನ್ನು ಅರ್ಜಿದಾರರು ಹಿಂದಿನ ಐದು ಆರ್ಥಿಕ ವರ್ಷಗಳ ಬ್ಲಾಕ್ ಕಾಲಾವಧಿಯ ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ಪೂರೈಸಿರಬೇಕು. ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳಿಂದ ದೃಡೀಕರಣ ಪತ್ರವನ್ನು ಒದಗಿಸತಕ್ಕದ್ದು.

2 ಈ ಕಾಮಗಾರಿಗೆ ಭಾಗವಹಿಸುವ ಗುತ್ತಿಗೆದಾರರು ಕೆಲಸಕ್ಕೆ ಅವಶ್ಯಕವಾದ ಎಲ್ಲಾ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ಹೊಂದಿರುವ ಬಗ್ಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ –4 ರಲ್ಲಿ ತಿಳಿಸಿರುವಂತೆ ಒದಗಿಸುವುದು. ಹಾಗೂ ನೋಟರಿಯವರ ಮುಂದೆ ಪ್ರಮಾಣಿಕರಿಸದ ಪತ್ರಗಳೊಂದಿಗೆ ಹಾಗೂ ಆದಾಯ ತೆರಿಗೆ, ವಾಣಿಜ್ಯ ತೆರಿಗೆ ಸಂದಾಯದ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು.

3 ಗುತ್ತಿಗೆದಾರರು ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೇ ಮಧ್ಯದಲ್ಲಿ ತೊರೆದಿರಬಾರದು. ಹಾಗೂ ಸಕಾರಣವಿಲ್ಲದೇ ಯಾವುದೇ ಕಾಮಗಾರಿಗಳನ್ನು ವಿಳಂಬವಾಗಿ ಪೂರೈಸಿರಬಾರದು.

4 ಅರ್ಜಿದಾರರು ತಮ್ಮ ಗುತ್ತಿಗೆ ನೊಂದಾವಣೆ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

5 ಗುತ್ತಿದಾರರು ಭಾಗವಹಿಸುವ ಕಾಮಗಾರಿಯ ಅಂದಾಜು ಮೊತ್ತದ ಶೇ 30 ರಷ್ಟು ಮೌಲ್ಯಕ್ಕೆ ರಾಷ್ಟ್ರೀಕೃತ ಬಾಂಕ್‌ಗಳಿಂದ ಸಾಲ ಪಡೆಯುವ ಸಾಮಾರ್ಥ್ಯದ ಬಗ್ಗೆ (ಲೈನ್ ಆಫ್ ಕ್ರಡಿಟ್) ದೃಡೀಕರಣ ಪತ್ರ ಲಗತ್ತಿಸತಕ್ಕದ್ದು.

6 ಟೆಂಡರ್ ಫಾರಂಗಳನ್ನು ಈ ಕಛೇರಿಯಿಂದ ತೆಗೆದುಕೊಂಡು ಹೋಗುವಾಗ ತಮ್ಮ ರಿಜಿಸ್ಟ್ರೇಷನ್ ಪಾಸ್ ಬುಕ್‌ನ್ನು ಒದಗಿಸಿ ಕೆಲಸದ ವಿವರಗಳನ್ನು ದಾಖಲಿಸಿಕೊಳ್ಳತಕ್ಕದ್ದು.

7 ಕಾರ್ಯದೇಶ ಪಡೆಯುವ ಮುನ್ನ ಬಿಡ್ ಮೊತ್ತದ ಮೇಲೆ ಶೇ5% ರಷ್ಟು ಎಫ್.ಎಸ್.ಡಿ.ಹಣವನ್ನು ಡಿ.ಡಿ.ಮುಖಾಂತರ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಸಲ್ಲಿಸತಕ್ಕದ್ದು. (ಕರ್ನಾಟಕ ಟೆಂಡರ್ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW–2 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟಿರುತ್ತದೆ.)

8 ಟೆಂಡರ್ ಸಲ್ಲಿಸುವಾಗ ಅನುಸೂಚಿ ದರಕ್ಕಿಂತ ಕಡಿಮೆ ದರ ಸಲ್ಲಿಸದಲ್ಲಿ ವ್ಯೆತ್ಯಾಸ ಮೊಬಗಲನ್ನು ಡಿ.ಡಿ. ಯೊಂದಿಗೆ ಟೆಂಡರ್ ಜೊತೆಯಲ್ಲಿ ಲಗತ್ತಿಸತಕ್ಕದ್ದು ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು

9 ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಆದೇಶದನ್ವಯ ಪೂರ್ಣಗೊಂಡ ಕಾಮಗಾರಿಯ ದಿನಾಂಕದಿಂದ ಮುಂದುವರಿದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದವರೆಗೆ ಗುತ್ತಿಗೆದಾರರು ಕಾಯ್ದುಕೊಳ್ಳುವ ಜವಬ್ದಾರಿ ಇರುತ್ತದೆ. ನಂತರ ಭದ್ರತಾ ಠೇವಣೆಯನ್ನು ಹಿಂದಿರುಗಿಸಲಾಗುವುದು.

10 ಗುತ್ತಿಗೆದಾರರು ಮಾಡಿದ ಕಾಮಗಾರಿಯನ್ನು ಎಲ್ಲಾ ರೀತಿಯಿಂದ ಪೂರ್ಣಗೊಳಿಸಿ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸದ ಬಗ್ಗೆ ಪರೀಕ್ಷಿಸಿದ ವರದಿ ಬಂದ ನಂತರ ಕಾಮಗಾರಿಯನ್ನು ಹಸ್ತಾಂತರಿಸಿ ಕೊಳ್ಳಲಾಗುವುದು.

11 ಸದರಿ ಕಾಮಗಾರಿಗಳು ಎರಡು ಲಕೋಟೆಗಳನ್ನು ಹೊಂದಿದ್ದು ಲಕೋಟೆ–ಎ ಟೆಕ್ನಿಕಲ್ ಬಿಡ್, ಲಕೋಟೆ–ಬಿ ಫೈನಾನ್ಸಿಯಲ್ ಬಿಡ್‌ಗಳನ್ನು ಹೊಂದಿರುತ್ತದೆ. ಟೆಂಡರ್‌ದಾರರು ಟೆಂಡರ್‌ಗಳನ್ನು ಎರಡು ಪ್ರತ್ಯೇಕ ಲಕೋಟೆಗಳಲ್ಲಿ, ಮೊಹರಾದ ಲಕೋಟೆಯ ಮೇಲೆ ಲಕೋಟೆ –ಎ ಟೆಕ್ನಿಕಲ್ ಬಿಡ್, ಲಕೋಟೆ –ಬಿ ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಪ್ರತ್ಯೇಕವಾದ ಎರಡು ಲಕೋಟೆಗಳನ್ನು ಮತ್ತೊಂದು ಲಕೋಟೆಯಲ್ಲಿ ಹಾಕಿ ಟೆಕ್ನಿಕಲ್ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಟೆಂಡರ್ ಸಲ್ಲಿಸತಕ್ಕದ್ದು.

12 **ಲಕೋಟೆ –ಎ:** ಟೆಕ್ನಿಕಲ್ ಬಿಡ್ ದ್ವಿಪ್ರತಿಗಳಲ್ಲಿ ಗುತ್ತಿಗೆದಾರರ ಬಳಿಇರುವ ತಾಂತ್ರಿಕ ಮಾಹಿತಿಗಳನ್ನು ಹೊಂದಿದ್ದು ಅವುಗಳಿಗೆ ವಿವರಗಳನ್ನು ನಿಗದಿತ ರೀತಿಯಲ್ಲಿ ಸಲ್ಲಿಸಬೇಕು. ಹಾಗೂ ಕಾಮಗಾರಿಗಳಿಗೆ ಅವಶ್ಯಕವಾದ ಮೊತ್ತದ ಇ.ಎಂ.ಡಿ.ಯನ್ನು ನಿಗಧಿತ ರೀತಿಯಲ್ಲಿ ಪೌರಾಯುಕ್ತರು ನಗರಸಭೆ, ಶಿವಮೊಗ್ಗ ರವರ ಕೃಪೆಯಲ್ಲಿ ಒತ್ತೆಯಾಗಿಡಬೇಕು.

13 **ಲಕೋಟೆ –ಬಿ:** ಫೈನಾನಿಯಲ್ ಬಿಡ್ ಟೆಂಡರ್ ಷೆಡ್ಯೂಲ್‌ನ್ನು ದ್ವಿಪ್ರತಿಯಲ್ಲಿ ಹೊಂದಿದ್ದು ಪ್ರತಿ ಐಟಂಗಳಿಗೆ ದರವನ್ನು ಅಂಕೆಯಲ್ಲಿ ಮತ್ತು ಅಕ್ಷರಗಳಲ್ಲಿ ಸಲ್ಲಿಸಬೇಕು.

14 **ಲಕೋಟೆ –ಎ** ಟೆಕ್ನಿಕಲ್ ಬಿಡ್ ಮೊದಲು ತೆರೆಯಲಾಗುವುದು. ಹಾಗು ಗುತ್ತಿಗೆದಾರರು ಇದರಲ್ಲಿ ಒದಗಿಸಿರುವ ವಿವರಗಳನ್ನು ಪರಿಶೀಲಿಸಲಾಗುವುದು. ಇದರಲ್ಲಿ ಅರ್ಹತೆ ಪಡೆಯುವ ಗುತ್ತಿಗೆದಾರರ ಲಕೋಟೆ –ಬಿ ಫೈನಾನ್ಸಿಯಲ್ ಬಿಡ್‌ನ್ನು ತೆರೆಯಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ದಾರವು ಅಂತಿಮವಾಗಿರುತ್ತದೆ.

15 ಟೆಂಡರ್‌ದಾರರು ವ್ಯಾಟ್ ನೊಂದಾಯಿಸಿದ ಪ್ರತಿ ಹಾಗೂ ಕಳೆದ ಸಾಲಿನವರೆಗೆ ವಾಣಿಜ್ಯ ತೆರಿಗೆ ಪಾವತಿಸಿರುವ ಬಗ್ಗೆ ತೀರುವಳಿ ಪತ್ರ ಹಾಗುಟೆಂಡರ್ ಪುಸ್ತಕದಲ್ಲಿ ನಮೂದಿಸಿದ ಪೈನಾನ್ಸಿಯಲ್ ಟರ್ನ್ ಓವರ್ ಹೊಂದಿರಬೇಕು.

16 ಟೆಂಡರ್ ಸಲ್ಲಿಸುವವರು ಟೆಂಡರ್ ನಲ್ಲನ ಅಗತ್ಯ ನಿಭಂದನೆಗಳನ್ನು ಪೂರೈಸಲು ಬೇಕಾದ ಲಗತ್ತುಗಳನ್ನು ಟೆಂಡರ್ ಪುಸ್ತಕದೊಂದಿಗೆ ಲಗತ್ತಿಸುವುದು.

17 ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ. ಹಾಗೂ ವೆಬ್ ಸೈಟ್ www.shimoga city.gov.in ಸಹ ಪಡೆಯಬಹುದು

(ಶ್ರೀ.ಎನ್.ಜೆ.ರಾಜಶೇಖರ್)
ಅಧ್ಯಕ್ಷರು
ನಗರಸಭೆ, ಶಿವಮೊಗ್ಗ

(ಶ್ರೀ.ಬಿ.ಜಯಣ್ಣ)
ಪೌರಾಯುಕ್ತರು
ನಗರಸಭೆ, ಶಿವಮೊಗ್ಗ

( ಶ್ರೀ ಪಂಕಜ್ ಕುಮಾರ್ ಪಾಂಡೆ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಐ.ಡಿ.ಎಸ್. ಎಮ್. ಟಿ. ಸಮಿತಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.